## ತ್ಯಾಜ್ಯಗಳಿಂದ ಕಲೆ

ನನ್ನ ಅತ್ತೆ ಶಾಂತಾ ಅವರಿಗೆ ಮುಂಚಿನಿಂದಲೂ ಕರಕುಶಲ ವಸ್ತುಗಳಲ್ಲಿ ವಿಶೇಷ ಆಸಕ್ತಿ. ಶಿಕ್ಷಕಿ ವೃತ್ತಿಯಿಂದ ನಿವೃತ್ತರಾದ ಬಳಿಕ ಕರಕುಶಲ ಕಲೆಯಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದಾರೆ. ಮನೆಯಲ್ಲಿ ಬಳಸದೇ ಇರುವ ತ್ಯಾಜ್ಯಗಳಾದ ಪ್ಲಾಸ್ಟಿಕ್ ಬಾಟಲ್, ಹಳೆಯ ದಿನಪತ್ರಿಕೆ, ಪ್ಯಾಕಿಂಗ್‌ನ ಸಾಮಗ್ರಿಗಳು, ಬಿದಿರಿನ ಕೊಳವೆ, ಚಿಕ್ಕ ಬಟ್ಟೆ ಸೇರಿದಂತೆ ಇತರೆ ವಸ್ತುಗಳನ್ನು ಹೊರಗಡೆ ಬಿಸಾಡದೆ ಸಂಗ್ರಹಿಸುವ ಅವರು, ಅವುಗಳಿಂದ ಹೂದಾನಿಗಳು, ವಿವಿಧ ಹೂವುಗಳು, ತೂಗುನಕ್ಷತ್ರ ಸೇರಿದಂತೆ ಹಲವಾರು ಕಲಾಕೃತಿಗಳನ್ನು ತಯಾರಿಸುತ್ತಾರೆ. ಅವುಗಳಿಂದಲೇ ಮನೆಯ ಅಂದವನ್ನು ಹೆಚ್ಚಿಸುತ್ತಾರೆ.

–ಸುಮಾ ಪಿ. ರಾವ್,



## ಬಿಚ್ಚಾಲೆ ಹನುಮಂತ

ಮಂತ್ರಾಲಯದ ಹತ್ತಿರ ಬಿಚ್ಚಾಲೆ ಇದೆ. ಪಕ್ಕದಲ್ಲೇ ತುಂಗಭದ್ರೆಯೂ ಹರಿವಳು. ನದಿಯ ತೀರದಲ್ಲಿ ರಾಘವೇಂದ್ರಸ್ವಾಮಿಗಳು ಪ್ರತಿಷ್ಠಾಪಿಸಿದ ಮುಖ್ಯ ಪ್ರಾಣದೇವರೇ ಬಿಚ್ಚಾಲೆ ಹನುಮಂತ. ಬಿಚ್ಚಾಲೆ ಅತ್ಯಂತ ಸುಂದರ ರಮಣೀಯ ತಾಣ. ಮಂತ್ರಾಲಯಕ್ಕೆ ಭೇಟಿ ನೀಡಿದ ಬಹುತೇಕರು ಇಲ್ಲಿಗೆ ಬಂದು ಹೋಗುತ್ತಾರೆ. ನದಿ ತಟದಲ್ಲೇ ರಾಘವೇಂದ್ರಸ್ವಾಮಿಗಳ ಬೃಂದಾವನವಿದೆ.

–ಶ್ರೀಧರ ರಾಯಸಂ, ಬೆಂಗಳೂರು





## ಬೆಂಗಳೂರಿನಲ್ಲಿ ಬಳೆಗಾರ!

ಮಲೆನಾಡಿನಲ್ಲಿ ಬಳೆಗಾರರಿಗೆ ಎಲ್ಲಿಲ್ಲದ ಗೌರವ. ನಮ್ಮೂರಿಗೆ ಬಳೆಗಾರ ಬಂದ ತಕ್ಷಣ ಓಡಿ ಹೋಗಿ ಅಮ್ಮನಿಗೆ ಮೊದಲು ಸುದ್ದಿ ಮುಟ್ಟಿಸಲಾಗುತ್ತದೆ. ಮನೆಗೆ ಬಂದ ಅವರನ್ನು ಅಂಗಳದಲ್ಲಿ ಚಾಪೆ ಹಾಸಿ ಕೂರಿಸಿ ಅಕ್ಕಪಕ್ಕದ ಮನೆಯವರನ್ನೆಲ್ಲಾ ಒಟ್ಟುಗೂಡಿಸಲಾಗುತ್ತದೆ. ಅಷ್ಟೊತ್ತಿಗಾಗಲೇ ಅಮ್ಮ ಬಳೆಗಾರರರಿಗೆ ಕುಡಿಯಲು ನೀರು ಮತ್ತು ಬೆಲ್ಲ ತಂದು ನೀಡುತ್ತಿದ್ದರು. ಆಗ ನಮಗೆಲ್ಲಾ ಬಣ್ಣ ಬಣ್ಣದ ಬಳೆ ತೊಡುವುದೇ ಒಂದು ಸಂಭ್ರಮ.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಮಕ್ಕಳನ್ನು ಶಾಲೆಗೆ ಬಿಡಲು ಹೋದಾಗ ಈ ಬಳೆಗಾರರನ್ನು ನೋಡಿ ಒಮ್ಮೆಲೇ ಆಶ್ಚರ್ಯ, ಸಂತೋಷ ಆಗಿ ಮಕ್ಕಳಿಗೆ ಬಳೆ ತೊಡಿಸಿದ್ದೆ. ಆಗ ನನ್ನ ಬಳಿ ಕ್ಯಾಮೆರಾ ಇರಲಿಲ್ಲ ಫೋಟೊ ತೆಗೆಯಲು ಆಗಿರಲಿಲ್ಲ. ಆದರೆ ಬಹಳ ವರ್ಷಗಳ ಬಳಿಕ ಮತ್ತೆ ಅದೇ ಬಳೆಗಾರರು ಅದೇ ಸ್ಥಳದಲ್ಲಿ ಪ್ರತ್ಯಕ್ಷವಾದಾಗ ಸಂತೋಷದಿಂದ ಫೋಟೊ ತೆಗೆದೆ. ಅವರ ದೂರವಾಣಿ ಸಂಖ್ಯೆಯನ್ನೂ ತೆಗೆದುಕೊಂಡೆ. 'ನಿನಗೆ ಒಳ್ಳೆಯದಾಗಲಿ' ಎಂದು ಆಶೀರ್ವಾದ ಮಾಡಿದಾಗ ಹೃದಯ ತುಂಬಿ ಬಂತು.

–ಪೂರ್ಣಿಮಾ ಆಗುಂಬೆ, ಬೆಂಗಳೂರು